ಅರಣ್ಯ ಇಲಾಖೆ

# ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮೈಸೂರು ವೃತ್ತ, ಅರಣ್ಯ ಭವನ, ಅಶೋಕಪುರಂ, ಮೈಸೂರು

ಸಂಖ್ಯೆ–ಸಿ1/ಭೂಮಿ/ಎಸ್.ಸಿ/ಸಿಆರ್–3/2018–19 ದೂರವಾಣಿ / ಫ್ಯಾಕ್ಸ್ ಸಂಖ್ಯೆ–2480875

ದಿನಾಂಕ : 21–10–2021

ಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
(ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು

ಮಾನ್ಯರೇ,

**Proposal No FP/KA/Others/29220/2017**

ವಿಷಯ:– Diversion of 0.0909 Ha (revised from 0.1818 ha) of forest land in sy no. 10 of Pandavapura Village Mandya District for Construction of Ambedkar Bhavan by Social welfare Department in Pandavapura Town in favour of Assitant Director, Department of Social Welfare. Pandavapura , Mandya District.

ಉಲ್ಲೇಖ:–
1. ತಮ್ಮ ಕಛೇರಿ ಪತ್ರ ಸಂಖ್ಯೆ : ಎ5/ (ಎ3)/ಜಿ.ಎಫ್.ಎಲ್ 10/2018 ಎಫ್.ಸಿ ದಿನಾಂಕ : 27–01–2021.
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ವಿಭಾಗ, ಮಂಡ್ಯ ಇವರ ಕಛೇರಿ ಪತ್ರ ಸಂಖ್ಯೆ : ಸಿ1/ಲ್ಯಾಂಡ್/ಜಿಎಲ್ –1901/2012–13 ದಿನಾಂಕ : 28–09–2021.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ತಮ್ಮ ಕಛೇರಿ ಪತ್ರದಲ್ಲಿ ಸೂಚಿಸಿರುವಂತೆ, ಕೇಂದ್ರ ಸರ್ಕಾರವು ತಿಳಿಸಿರುವ ಮೂರು ಅಂಶಗಳ ಆಕ್ಷೇಪಣೆಗಳಿಗೆ ಮಾಹಿತಿ / ದಾಖಲಾತಿಗಳನ್ನು ಎಫ್.ಸಿ ವೆಬ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ತಿಳಿಸಿರುವ ಮೇರೆಗೆ, ಸಹಾಯಕ ನಿರ್ದೇಶಕರು , ಸಮಾಜ ಕಲ್ಯಾಣ ಇಲಾಖೆ, ಪಾಂಡವಪುರ ರವರು ಮೂರು ಅಂಶಗಳಿಗೆ ಸಂಬಂಧಪಟ್ಟಂತೆ ವರದಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ವಿಭಾಗ, ಮಂಡ್ಯ ರವರಿಗೆ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಪಾಂಡವಪುರ ಟೌನ್‌ನಲ್ಲಿರುವ ಸರ್ವೆ 10 ರ ನಿವೇಶನವು ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಸೂಕ್ತ ಜಾಗವಾಗಿದ್ದು, ಪಟ್ಟಣದ ಮಧ್ಯ ಭಾಗದಲ್ಲಿದ್ದು ಅನುಕೂಲಕರವಾಗಿರುತ್ತದೆ. ಈ ನಿವೇಶನ ಹೊರತುಪಡಿಸಿ ಕಂದಾಯ ಇಲಾಖೆಯ ಯಾವುದೇ ಜಾಗಗಳು ಭವನ ನಿರ್ಮಾಣ ಮಾಡಲು ಸೂಕ್ತವಾಗಿರುವುದಿಲ್ಲ. ಹಾಗೂ ಹಾರೋಹಳ್ಳಿ ಸರ್ವೆ ನಂ 13 ರಲ್ಲಿ ಗುರುತಿಸಿರುವ ಬದಲಿ ಜಾಗವು ಟೌನ್ ಪ್ರದೇಶದಿಂದ ದೂರದಲ್ಲಿದ್ದು, ಭವನ ನಿರ್ಮಾಣ ಮಾಡುವುದಕ್ಕೆ ಸೂಕ್ತವಾಗಿರುವುದಿಲ್ಲ. ಸರ್ವೆ ನಂ 10 ರ ಪ್ರದೇಶವು ಎಲ್ಲ ವಿಧದಲ್ಲೂ ಭವನ ನಿರ್ಮಾಣಕ್ಕೆ ಸೂಕ್ತವಾಗಿದ್ದು, ಸಾರ್ವಜನಿಕರಿಗೆ ಅನುಕೂಲಕರವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ದಿನಾಂಕ : 16–09–2021 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ವಿಭಾಗ, ಮಂಡ್ಯ ರವರು ಸ್ಥಳ ಪರಿಶೀಲನೆ ಮಾಡಿದ್ದು, ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಗುರುತಿಸಿರುವ ಪಾಂಡವಪುರ ಗ್ರಾಮದ ಸರ್ವೇ ನಂ 10 ರ ಪ್ರದೇಶದ ಸ್ಥಳವು ಪಟ್ಟಣದ ಮಧ್ಯ ಭಾಗದಲ್ಲಿದ್ದು, ಎಲ್ಲಾ ವಿಧದಲ್ಲೂ ಭವನ ನಿರ್ಮಾಣಕ್ಕೆ ಸೂಕ್ತವಾದ ಪ್ರದೇಶವಾಗಿರುತ್ತದೆ ಎಂಬ ವಿಷಯವನ್ನು ತಿಳಿಸಿ, ಸಂಬಂಧಿಸಿದ ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಸದರಿ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಪಾಂಡವಪುರ ಟೌನ್ ಸರ್ವೇ ನಂ 10 ರ ಜಾಗವು ಟೌನ್ ವ್ಯಾಪ್ತಿಯಲ್ಲಿದ್ದು, ಸದರಿ ಸ್ಥಳದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು ಸೂಕ್ತವಾಗಿರುವುದರಿಂದ, ಹಾಗೂ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ನೀಡಿರುವ ಆಕ್ಷೇಪಣೆಗೆ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಪಾಂಡವಪುರ ಇವರು ನೀಡಿರುವ ವರದಿಯನ್ನು ಹಾಗೂ ಸಂಬಂಧಿಸಿದ ದಾಖಲಾತಿ ಮತ್ತು ನಕಾಶೆಯನ್ನು ಈ ಕೂಡ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

PL/21-10-2021

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಮೈಸೂರು ವೃತ್ತ, ಮೈಸೂರು.

1. ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ವಿಭಾಗ, ಮಂಡ್ಯ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಪಾಂಡವಪುರ, ಮಂಡ್ಯ ಜಿಲ್ಲೆ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

23/12/2021